# ಸುದ್ದಿ ಸಂಚಯ

## ಗೀತಾದರ್ಶನ ಚಿತ್ರಪ್ರದರ್ಶಿನಿ

ಗೀತೋಪನಿಷತ್ತುಗಳಲ್ಲಿ ಅಡಕವಾಗಿರುವ ಅಮೂರ್ತವಾದ ಭಾವನೆಗಳನ್ನು ಮೂರ್ತರೂಪದಲ್ಲಿ ಬಹುವರ್ಣರಂಜಿತ ಚಿತ್ರಗಳ ಮೂಲಕ ಗ್ರಹಿಸುವಂತೆ ಮಾಡಿರುವ ಒಂದು ಯಶಸ್ವೀ ಪ್ರಯತ್ನದ ಹೆಮ್ಮೆಗೆ ಪಾತ್ರವಾಗಿದೆ ಹೈದರಾಬಾದ್‌ನಲ್ಲಿನ ರಾಮಕೃಷ್ಣ ಮಠ. ಮಕ್ಕಳಿಂದ ಹಿಡಿದು ವೃದ್ಧರಿಗೂ ಅರ್ಥವಾಗುವಂತೆ ಆಯೋಜಿಸಲಾಗಿರುವ ಈ ಚಿತ್ರಗಳ ಪ್ರದರ್ಶನವನ್ನು ಅದಕ್ಕಾಗಿಯೇ ನಿರ್ಮಾಣ ಮಾಡಲಾಗಿರುವ ಗೀತಾದರ್ಶನ ಎಂಬ ಭವನದಲ್ಲಿ ಶಾಶ್ವತವಾಗಿ ಸಾರ್ವಜನಿಕರ ವೀಕ್ಷಣೆಗಿರಬೇಕೆಂಬ ಉದ್ದೇಶದಿಂದ ಮಾಡಲಾಗಿದೆ.



ಗೀತಾದರ್ಶನದಲ್ಲಿರುವ ಗೀತೋಪದೇಶದ ಚಿತ್ರಫಲಕ

ಎಲ್ಲ ದಿಕ್ಕುಗಳಲ್ಲೂ ಸ್ವಲ್ಪ ಉನ್ನತವಾಗಿರುವ ಆಯಕಟ್ಟನ್ನು ಹೊಂದಿರುವಂತಹ ಗೀತಾದರ್ಶನದ ಭವನದ ಪರಿಕಲ್ಪನೆಯೂ ಅಪೂರ್ವವಾಗಿದ್ದು, ಭಗವಾನ್ ಶ್ರೀಕೃಷ್ಣನು ರಥಾರೂಢನಾಗಿ ಗೀತೋಪದೇಶ ಮಾಡಿದಾಗಿನ ದೃಶ್ಯವನ್ನು ನೆನಪಿಸುತ್ತದೆ. ಸುಮಾರು ೧೦೦ಕ್ಕಿಂತಲೂ ಹೆಚ್ಚು ಬಹು ವರ್ಣರಂಜಿತ ಚಿತ್ರಗಳನ್ನು ಫೈಬರ್‌ಗ್ಲಾಸ್ ಶೀಟ್‌ಗಳಲ್ಲಿ ಮೂಡಿಸಿ ಪ್ರದರ್ಶಿಸಲಾಗಿದೆ. ಪ್ರತಿಯೊಂದು ಚಿತ್ರಕ್ಕೂ ಸಂಬಂಧಿಸಿದ ಗೀತೋಪನಿಷತ್ತುಗಳ ಶ್ಲೋಕ, ವ್ಯಾಖ್ಯಾನಗಳನ್ನು ಆ ಚಿತ್ರಕ್ಕೆ ಹೊಂದಿಕೊಂಡಿರುವಂತೆ ಇರಿಸಲಾಗಿರುವ ಹೆಡ್‌ಫೋನ್ ಮೂಲಕ ವೀಕ್ಷಕರು ಕೇಳಿ ತಿಳಿಯಬಹುದಾಗಿದೆ.

'ಗೀತಾದರ್ಶನ' ಭವನದ ಮೊದಲನೆಯ ಮಹಡಿಯಲ್ಲಿ 'ಸಂತದರ್ಶನ' ಎಂಬ ಆರ್ಟ್ ಗ್ಯಾಲರಿ ಇದೆ. ಈ ಆರ್ಟ್ ಗ್ಯಾಲರಿಯಲ್ಲಿ ಸುಮಾರು ೬೦ ಸಂತರ ಬದುಕು ಮತ್ತು ಸಂದೇಶಗಳ ಚಿತ್ರಣಗಳನ್ನು ಕೊಡಲಾಗಿದೆ. ಏಪ್ರಿಲ್‌ನಲ್ಲಿ ಉದ್ಘಾಟನೆಯಾದ ಗೀತಾದರ್ಶನ ಮತ್ತು ಸಂತದರ್ಶನದ ಸಂದರ್ಭದಲ್ಲಿ ಒಂದು ಸ್ಮರಣಸಂಚಿಕೆಯನ್ನೂ ಗೀತೋಪದೇಶಗಳನ್ನೊಳಗೊಂಡ ೫ ಸಿ.ಡಿ.ಗಳನ್ನೂ ಬಿಡುಗಡೆ ಮಾಡಲಾಯಿತು. ಅದೇ ಸಂದರ್ಭದಲ್ಲಿ human excellence. org ಎಂಬ ವೆಬ್ ಸೈಟೊಂದನ್ನೂ ಸಹ ಆರಂಭಿಸಲಾಯಿತು. **ಗೀತೋಪದೇಶದ ಬಹುವರ್ಣರಂಜಿತ ಚಿತ್ರಗಳ ಕಲಾಕಾರರು ಕರ್ನಾಟಕದವರೇ ಆದ ಮಂಗಳೂರು ರಾಮಕೃಷ್ಣ ಆಶ್ರಮದ ಭಕ್ತರಾದ ಶ್ರೀ ಪುರುಷೋತ್ತಮ ಕಾರಂತರು ಎನ್ನುವುದು ಹೆಮ್ಮೆಯ ವಿಷಯ.**

✳

## ಕೊಲ್ಕತಾದ ಬಲರಾಮ ಮಂದಿರದಲ್ಲಿ ರಥಯಾತ್ರೆ

ಕೊಲ್ಕತಾದ ರಾಮಕೃಷ್ಣ ಮಠದ ಬಲರಾಮ ಮಂದಿರದ ವಿಶೇಷ ವಾರ್ಷಿಕ ಉತ್ಸವ ರಥಯಾತ್ರೆಯು ಇದೇ ಜುಲೈ ೧ರ ಮಂಗಳವಾರದಂದು ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳನ್ನು ಆಕರ್ಷಿಸಿತು. ಭಗವಾನ್ ಶ್ರೀರಾಮಕೃಷ್ಣರು ನೂರು ಬಾರಿ ಭೇಟಿಯಿತ್ತಿದ್ದರೆನ್ನಲಾದ ಧನ್ಯ ಭಕ್ತ ಬಲರಾಮಬಸುವಿನ ಈ ಭವನದಲ್ಲಿ ನಡೆಯುವ ರಥಯಾತ್ರೆ ಪುರಿಕ್ಷೇತ್ರದಲ್ಲಿ ನಡೆಯುವ ಜಗನ್ನಾಥ ಯಾತ್ರೆಯನ್ನು ನೆನಪಿಸುವ ರೀತಿಯಲ್ಲಿ ನಡೆಯಿತು.

ಬ್ರಾಹ್ಮೀಮುಹೂರ್ತದಲ್ಲಿ ಮಂಗಳಾರತಿ ಯೊಡನೆ ಆರಂಭವಾಗಿ ವಿಶೇಷ ಪೂಜೆ, ಹೋಮ, ಭಕ್ತಿಗೀತೆ ಮೊದಲಾದ ಕಾರ್ಯಕ್ರಮಗಳಿದ್ದವು. ಅಪರಾಹ್ನ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಗೀತಾನಂದಜಿ ಮಹಾರಾಜ್‌ರವರು ರಥವನ್ನು ಭವನದ ಸುತ್ತ ನಡೆಸುವ ಅನುಷ್ಠಾನಕ್ಕೆ ಚಾಲನೆಯಿತ್ತರು. ಇಡೀ ದಿನ ಕಲಾವಿದರಿಂದ ಭಕ್ತಿಗೀತೆಗಳು, ಭಜನೆ ಮುಂತಾದ ಕಾರ್ಯಕ್ರಮಗಳಿದ್ದವು.

✳

## ಮೈಸೂರಿನಲ್ಲಿ ಆಧ್ಯಾತ್ಮಿಕ ಶಿಬಿರ

ಮೈಸೂರಿನ ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಜೂನ್ ೨೫ ರಿಂದ ೨೯ರವರೆಗೆ ನಡೆದ ೫ ದಿನಗಳ ಆಧ್ಯಾತ್ಮಿಕ ಶಿಬಿರದಲ್ಲಿ ಸುಮಾರು ೧೫೦ ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಪ್ರಾತಃಕಾಲದಲ್ಲಿ ಪ್ರಾರ್ಥನೆ ಮತ್ತು ಧ್ಯಾನಗಳಿಂದ ಆರಂಭವಾಗುತ್ತಿದ್ದ ಈ ಶಿಬಿರದಲ್ಲಿ ಆಧ್ಯಾತ್ಮಿಕ ವಿಷಯಗಳನ್ನು ಕುರಿತ ಉಪನ್ಯಾಸಗಳನ್ನು ಆಶ್ರಮದ ಸ್ವಾಮೀಜಿಯವರು ನಡೆಸಿಕೊಡುತ್ತಿದ್ದರು. ದಿವ್ಯತ್ರಯರ ಬದುಕು ಮತ್ತು ಸಂದೇಶ, ಅಧ್ಯಾತ್ಮಜೀವನದ ಮೂಲಭೂತ ಆವಶ್ಯಕತೆಗಳು, ಧ್ಯಾನ, ಭಗವದ್ಗೀತೆ, ನಾಲ್ಕು ಯೋಗಗಳು, ಪತಂಜಲ ಯೋಗದರ್ಶನ, ನಾರದಭಕ್ತಿಸೂತ್ರ, ಕಠೋಪನಿಷತ್ ಇವು ಶಿಬಿರದಲ್ಲಿ ಚರ್ಚಿಸಲಾದ ಕೆಲವು ಪ್ರಮುಖ ವಿಷಯಗಳು. ಪ್ರತಿದಿನವೂ ಬೆಳಗಿನ ತರಗತಿಗಳ ನಂತರ ಪ್ರಾರ್ಥನಾ ಮಂದಿರದಲ್ಲಿ ಅಷ್ಟೋತ್ತರ ಪೂಜೆ ಹಾಗೂ ಸಂಜೆ ಸಂಧ್ಯಾರತಿ ಮತ್ತು ಪ್ರಾರ್ಥನೆ ಇರುತ್ತಿದ್ದವು. ರಾತ್ರಿಯ ಊಟದ ನಂತರ ಸ್ವಾಮೀಜಿಯವರೊಡನೆ ಸತ್ಸಂಗ ಮತ್ತು ತಂಡಗಳಲ್ಲಿ ಪ್ರಶ್ನೋತ್ತರ ಕಾರ್ಯಕ್ರಮಗಳು ಹಾಗೂ ಚಲನ ಚಿತ್ರ ಪ್ರದರ್ಶನ ಕಾರ್ಯಕ್ರಮವೂ ಇರುತ್ತಿದ್ದವು.

✳